been stopped suddenly from the year 1964 though such appointments were being made till 1964 ?

*A.*—SRI S. R. KANTHI (Minister for Education).—

(*a*) 31.
(*b*) 866.
(*c*) 28.
(*d*) No.

ಶ್ರೀ ಎಂ. ಎನ್. ಕೃಷ್ಣ ಸಿಂಗ್.—ರಾಜ್ಯದಲ್ಲಿ ನಾಲ್ಕನೆಯ ಯೋಜನೆಯಲ್ಲಿ ಹೊಸದಾಗಿ ಏನಾದರೂ ಪಾಲಿಟೆಕ್ನಿಕ್‌ಗಳನ್ನು ತೆರೆಯುವುದಕ್ಕೆ ಯೋಚನೆ ಮಾಡಿದ್ದೀರಾ, ಸ್ವಾಮಿ.

ಶ್ರೀ ಎಸ್. ಆರ್. ಕಂಠಿ.—ಇನ್ನೂ ನಾಲ್ಕನೆಯ ಯೋಜನೆ ಪೂರ್ತಿಯಾಗಿ ತೀರ್ಮಾನವಾಗಿಲ್ಲ. ನಾಲ್ಕನೆಯ ಯೋಜನೆಯಲ್ಲಿ ಹೆಚ್ಚು ಪಾಲಿಟೆಕ್ನಿಕ್‌ಗಳನ್ನು ತೆರೆಯುವ ಅವಕಾಶ ಇದ್ದಂತೆ ನನಗೆ ಕಾಣುವುದಿಲ್ಲ.

ಶ್ರೀ ಸಿ. ಜೆ. ಮುಕ್ತಣ್ಣಪ್ಪ.—ಪಡ್ಯೂಲ್ಡ್ ಕ್ಯಾಸ್ಟ್ ಮತ್ತು ಡಿಪ್ರೆಸ್ಡ್ ಕ್ಲಾಸಸ್‌ಗೆ ಸೇರಿದವರನ್ನು ಬಿಟ್ಟು ಪಾಲಿಟೆಕ್ನಿಗಳಲ್ಲಿ ಡಿಪ್ಲೋಮಾ ಪಡೆದಿರುವ ಸಿವಿಲ್ ಇಂಜಿನಿಯರಿಂಗ್ ವಿಭಾಗದವರು ಎಷ್ಟು ಜನ ನಿರುದ್ಯೋಗಿಗಳಾಗಿದ್ದಾರೆ, ಸ್ವಾಮಿ?

ಶ್ರೀ ಎಸ್. ಆರ್. ಕಂಠಿ.—ಇವತ್ತಿಗೆ ಎರಡು ಸಾವಿರದ ಇನ್ನೂರಕ್ಕೆ ಮೇಲ್ಪಟ್ಟು ನಿರುದ್ಯೋಗಿಗಳಿದ್ದಾರೆ

---

## Irrigation of Lands under Hemavathi Anicut

*Q.*—309. SRI B. BYRAPPAJI (Turuvekere).—

Will the Government be pleased to state :—

(*a*) the extent of land proposed to be irrigated under the Hemavathi anicut near Gorur after it is constructed (Taluk-wise information may please be furnished) ;

(*b*) whether it is not a fact that the members of the Legislative Assembly and the public of Tiptur, Chicknayakanahalli, Sira, Turuvekere, Kunigal and Gubbi of Tumkur District, Nelamangala Taluk of Bangalore District have represented to the Government to rivise the estimate of the anicut so as to supply water to the said areas from the Hemavathi anikat ;

(*c*) if so, the action they have taken on the representation ?

*A.*—SRI S. NIJALINGAPPA (Chief Minister).—

(*a*) 1,C0,CC0 acres (in the taluks of Hassan, Holenarasipur, Arkalgud, Channarayapatna, Krishnarajpet and Pandavapur). Taluk-wise areas are under finalisation.

(*b*) Yes.

(*c*) The request was examined and found highly uneconomical.

ಶ್ರೀ ಬಿ. ಬೈರಪ್ಪಾಜಿ.—(ಇ) ಗೆ ಉತ್ತರವಾಗಿ ಬೇಡಿಕೆಯನ್ನು ಪರಿಶೀಲಿಸಲಾಗಿದ್ದು ಅದು ಹೆಚ್ಚಿನ ಮಿತವ್ಯಯಕಾರಿಯಲ್ಲವೆಂಬುದಾಗಿ ಕಂಡುಬಂದಿತು ಎಂದು ಹೇಳಿದ್ದಾರೆ. ಮೇಲ್ಕಂಡ ಅಭಿಪ್ರಾಯವನ್ನು ಮತ್ತೆ ಇದನ್ನು ಪುನರ್ಪರಿಶೀಲನೆ ಮಾಡುತ್ತೇವೆಂದು ಒಪ್ಪಿಕೊಂಡಿರುವುದರಿಂದ ಈ ಪ್ರಶ್ನೆಯು ಮೇಲೆ ನಾನು ಯಾವ ಪ್ರಶ್ನೆಗಳನ್ನೂ ಕೇಳುವುದಿಲ್ಲ, ಸ್ವಾಮಿ.